ದಿನಾಂಕ 31-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1ನೇ ಎದುರುದಾರರ ಪರಃ**

1ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರು ಹಾಜರಾಗಿದ್ದು ಅವರ ಪರ ಸಾಕ್ಷಿಯ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರಃ**

ಕೆಎ-21-ಇಸಿ-0952 ನೋಂದಣಿ ಸಂಖ್ಯೆಯ ಮಾಲೀಕ ನಾನೇ. ಅದು ಹೋಂಡಾ ಕಂಪನಿಯ ಬೈಕ್ ಆಗಿದೆ. ಆ ಬೈಕನ್ನು ಚಲಾಯಿಸಲು ನನ್ನ ಹತ್ತಿರ ಡಿಎಲ್ ಇತ್ತು. ಈಗಲೂ ಕೂಡಾ ಡಿಎಲ್ ಚಾಲ್ತಿಯಲ್ಲಿ ಇದ್ದು ಅದನ್ನು ಹಾಜರುಪಡಿಸಬಲ್ಲೆ. ನಾನು ಡಿಎಲ್ ನ್ನು ಪುತ್ತೂರು RTO ರವರಿಂದ ಪಡೆದಿದ್ದೇನೆ. ಪ್ರಸ್ತುತವೂ ಸಹ ಬೈಕ್ ನನ್ನ ಹತ್ತಿರ ಇದೆ. ಕುಮರೇಶನ್ ಎನ್ನುವವರು ಬಾವ. ಅವರು ನನಗೆ 10-20 ವರ್ಷಗಳಿಂದ ಪರಿಚಯ. ಅಪಘಾತ ಕಾಲದಲ್ಲಿ ಬೈಕನ್ನು ನಾನೇ ಚಲಾಯಿಸುತ್ತಿದ್ದೆನು. ನಾನು ಅಪಘಾತ ಸಮಯ ಮೇಲೆ ತಿಳಿಸಿದ ಬೈಕಿನಲ್ಲಿ ಹಿಂಬದಿ ಸವಾರನಾಗಿದ್ದು ಬೈಕನ್ನು ಚಲಾಯಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

2. ಕುಮರೇಶನ್ ರವರಿಗೆ ದ್ವಿ ಚಕ್ರ ವಾಹನ ಓಡಿಸಲು ಡಿಎಲ್ ಇತ್ತು. ಸಾಯಂಕಾಲ 07.00-07.30 ರ ಅವಧಿಯಲ್ಲಿ ಅಪಘಾತ ಆಗಿತ್ತು. ನಾನು ಆ ದಿನ ಸುಳ್ಯದಿಂದ ಪುತ್ತೂರಿಗೆ ಬರುತ್ತಿದ್ದೆ. ಅಪಘಾತ ಆದ ಸ್ಥಳ ರಾ. ಹೆದ್ದಾರಿ. ಸ್ಥಳದಲ್ಲಿ ದಾರಿ ದೀಪ ಕೂಡಾ ಇತ್ತು. ಅಪಘಾತವಾದ ಸ್ಥಳ ನೇರ ರಸ್ತೆ. ಸ್ಥಳದಲ್ಲಿ ಇದ್ದ ಡಾಂಬರ್ ರಸ್ತೆ ಯಲ್ಲಿ ಎರಡೂ ಬದಿಯಿಂದ ಭಾರಿ ವಾಹನ ಹೋಗುವ ರಸ್ತೆ ಇತ್ತು. ಡಾಂಬರ್ ರಸ್ತೆ ಕಳೆದು 2 ಕಡೆ ಮಣ್ಣಿನ ರಸ್ತೆ ಇತ್ತು. ಮಣ್ಣಿನ ರಸ್ತೆಯ ಅಗಲ ಹೇಳಲು ಆಗುವುದಿಲ್ಲ.

3. ನನ್ನ ಎದುರು ಅಪಘಾತ ಕಾಲದಲ್ಲಿ ರಿಕ್ಷಾ ಬಂದು ಬೈಕ್ ಗೆ ಡಿಕ್ಕಿ ಪಡಿಸಿ ಅಪಘಾತ ಆಯಿತು. ಅಪಘಾತ ಕಾಲದಲ್ಲಿ ರಿಕ್ಷಾ ಸಡನ್ ಆಗಿ ರಸ್ತೆಗೆ ಬಂದಿದೆ. ನನ್ನ ಬೈಕ್ ನ ಎದುರು ಒಂದು ಲಾರಿ ಹೋಗುತ್ತಿತ್ತು. ಅಟೋ ರಿಕ್ಷಾ ಎದುರು ಬೇರೆ ವಾಹನಗಳು ಇದ್ದವು ಯಾವುದು ಎಂದು ಗಮನಿಸಿಲ್ಲ. ಎದುರು ಬರುತ್ತಿದ್ದ ವಾಹನಗಳು ಕಾಣುತ್ತಿತ್ತು. ನನ್ನ ಬೈಕಿಗೂ ಅಟೋ ರಿಕ್ಷಾಗೂ ಹೆಡ್ ಲೈಟ್ ಇತ್ತು. ನನ್ನ ಬೈಕ್ ಹಾಗೂ ಅಟೋ ರಿಕ್ಷಾ ಮುಖಾಮುಖಿಯಾಗಿ ಡಿಕ್ಕಿ ಆಗಿಲ್ಲ. ಅಟೋ ರಿಕ್ಷಾ ನನ್ನ ವಾಹನದ ಬಲಭಾಗಕ್ಕೆ ಡಿಕ್ಕಿಪಡಿಸಿದೆ. ನನ್ನ ವಾಹನದ ಎದುರುಭಾಗದ ಬಲಭಾಗಕ್ಕೆ ಜಖಂ ಆಗಿದೆ.

4. ಅಪಘಾತ ಸಂಬಂಧ ಕುಮರೇಶನ್ ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಅವರು ಅಪಘಾತ ಆದ 2 ದಿನಗಳು ನಂತರ ದೂರು ದಾಖಲಿಸಿದ್ದಾರೆ. ಅಪಘಾತದಲ್ಲಿ ಕುಮರೇಶನ್ ರವರಿಗೆ ಪೆಟ್ಟಾಗಿಲ್ಲ. ಅಪಘಾತ ಸಂಬಂಧಿತವಾಗಿ ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ. ಪೊಲೀಸರು ಅಪಘಾತಕ್ಕೆ ಒಳಪಟ್ಟ 2 ವಾಹನಗಳನ್ನು ಸೀಜ್ ಮಾಡಿದ್ದಾರೆ. ನನ್ನ ಅರ್ಜಿಯಲ್ಲಿ ನಮೂದಿಸಿರುವ ರಿಕ್ಷಾದ ನೋಂದಣಿ ಸಂಖ್ಯೆ ಹಾಗೂ ರಿಕ್ಷಾದ ಚಾಲಕನ ಹೆಸರು ಪೊಲೀಸರಿಗೆ ನನ್ನ ಬಾವ ಹೇಳಿರಬಹುದು.

5. ಹರೀಶ್ ಎನ್ನುವವರ ಪರಿಚಯ ನನಗೆ ಇಲ್ಲ. ಪೊಲೀಸರು ಅಪಘಾತ ಸಂಬಂಧಿತವಾಗಿ ಯಾರ ಯಾರ ಹೇಳಿಕೆ ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಬೈಕ್‌ಗೆ ಯಾವ ಇನ್ಸುರೆನ್ಸ್ ಕಂಪನಿಯಿಂದ ವಿಮೆ ಮಾಡಲಾಗಿತ್ತು ಎಂದು ಗೊತ್ತಿಲ್ಲ. ನನ್ನ ಬೈಕಿಗೆ ಡ್ಯಾಮೇಜ್ ಆದ ಸಂಬಂಧ ಬೈಕಿನ ಇನ್ಸುರೆನ್ಸ್ ಕಂಪನಿಗೆ ಮಾಹಿತಿ ತಿಳಿಸಿಲ್ಲ.

6. ಅಪಘಾತ ಸ್ಥಳದಲ್ಲಿ ನನ್ನ ವಾಹನದ ಬಲಬದಿಗೆ 5 ಅಡಿ ರಸ್ತೆ ಇತ್ತು ಎಂದರೆ ಸಾಕ್ಷಿಯು ನಾವು ರಸ್ತೆಯ ಎಡಭಾಗದಲ್ಲಿ ಇದ್ದೆವು, ಎಷ್ಟು ಅಡಿ ಬಲಬದಿಗೆ ಉಳಿದಿತ್ತು ಎಂದು ಹೇಳಲು ಆಗುವುದಿಲ್ಲ. ಕುಮರೇಶನ್ ಅತೀವೇಗ ಮತ್ತು ಅಜಾಗರೂಕತೆಯಿಂದ ಬೈಕ್ ಚಲಾವಣೆ ಮಾಡಿದ ಕಾರಣ ಅಪಘಾತ ಆತನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಆಟೋ ರಿಕ್ಷಾ ಚಾಲಕನ ತಪ್ಪು ಅಪಘಾತದದಲ್ಲಿ ಇಲ್ಲ ಎಂದರೆ ಸರಿಯಲ್ಲ. ಎದುರಿನಿಂದ ಬರುತ್ತಿದ್ದ ರಿಕ್ಷಾವನ್ನು ಕಂಡು ಕುಮರೇಶನ್ ರವರು ಹೋಗಿ ಡಿಕ್ಕಿ ಪಡಿಸಿದ್ದಾರೆ ಎಂದರೆ ಸುಳ್ಳು. ನಮ್ಮ ಬೈಕಿನ ಚಾಲಕನ ತಪ್ಪನ್ನು ಮರೆಮಾಚಲು ರಿಕ್ಷಾ ಚಾಲಕನ ವಿರುದ್ದ ಸುಳ್ಳು ಕೇಸು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ತಿಳಿಸಿದ ರೀತಿ ಹಾಗೂ ವಾಕ್ಯ ಪ್ರಮಾಣಪತ್ರದಲ್ಲಿ ನಮೂದಿಸಿದಂತೆ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮೇಲೆ ಪ್ರಭಾವ ಬೀರಿ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅರ್ಜಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

7. ಕೀರ್ತನ್ ಎನ್ನುವವರು ನನ್ನ ಮಗ. ಆತನು ಅಪಘಾತ ಸಮಯದಲ್ಲಿ ಸ್ಥಳದಲ್ಲಿ ಇರಲಿಲ್ಲ. ಕುಮರಶೇನ್ ಅಪಘಾತದ ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿಲ್ಲ ಎಂದರೆ ಸುಳ್ಳು. ನಾನು ಸಿಟಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದ ಬಗ್ಗೆದಾಖಲೆ ಕೊಟ್ಟಿದ್ದೇನೆ. ನನಗೆ ಗಾಯಗಳು ಹೇಗೆ ಆಯಿತು ಎನ್ನುವ ಬಗ್ಗೆ ಆಸ್ಪತ್ರೆಯಲ್ಲಿ ವೈದ್ಯರು ನನ್ನನ್ನು ವಿಚಾರಣೆ ಮಾಡಿದ್ದಾರೆ.

8. ಕೆಎಸ್ ಹೆಗ್ಡೆ ಆಸ್ಪತ್ರೆಗೆ ಅಂಬ್ಯುಲೆನ್ಸ್ ನಲ್ಲಿ ನನ್ನನ್ನು ಕುಮರಶೇನ್ ಹಾಗೂ ನನ್ನ ಮಗ ಕೀರ್ತನ್ ಕರೆದುಕೊಂಡು ಹೋಗಿದ್ದಾರೆ. ನನಗೆ ಆದ ಗಾಯಗಳ ಸಂಬಂಧ ವೈದ್ಯರು ಕೆಎಸ್ ಹೆಗ್ಡೆ ಆಸ್ಪತ್ರೆ ಯಲ್ಲಿ ವಿಚಾರಿಸಿದ್ದಾರೆ. ಕೆಎಸ್ ಹೆಗ್ಡೆ ಆಸ್ಪತ್ರೆಯಲ್ಲಿ ನನ್ನನ್ನು ವೈದ್ಯರಾದ ವಿಕ್ರಂ ಶೆಟ್ಟಿಯವರು ಚಿಕಿತ್ಸೆ ನೀಡಿದ್ದಾರೆ. ಅಪಘಾತದಲ್ಲಿ ನನಗೆ ಬಲಕಾಲಿಗೆ ಹಾಗೂ ಬಲಕೈಗೆ ಪೆಟ್ಟಾಗಿದೆ. ನನಗೆ ಯಾವ ಆಸ್ಪತ್ರೆಯಲ್ಲಿ ಯಾವ ವೈದ್ಯರು ಏನೆಲ್ಲಾ ಚಿಕಿತ್ಸೆ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಮತ್ತು ನನಗೆ ಏನೆಲ್ಲಾ ಗಾಯಗಳು ಆಗಿದ್ದು ಎಷ್ಟು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ಡಿಸ್ಚಾರ್ಜ್ ಸಮ್ಮರಿಯಲ್ಲಿ ಬರೆಯುತ್ತಾರೆ ಎಂದರೆ ಸರಿ. ನಾನು ವೈದ್ಯರು ಹೇಳಿದ ನಂತರ ಆಸ್ಪತ್ರೆಯಿಂದ ಬಿಡುಗಡೆಗೊಂಡಿರುತ್ತೇನೆ.

9. ನನಗೆ un control ಡಯಾಬಿಟಿಸ್ ಇತ್ತು ಎಂದರೆ ಮೊದಲು ಡಯಾಬಿಟಿಸ್ ಕಂಟ್ರೋಲ್ ನಲ್ಲಿ ಇತ್ತು. ಅಪಘಾತ ಆದ ನಂತರ ಈಗ ಡಯಾಬಿಟಿಸ್ un control ಆಗಿದೆ.

10. 25 ಡಿಸೆಂಬರ್ 2024 ರಂದು ಕಾಲಿಗೆ ಅಳವಡಿಸಿದ ರಾಡ್ ನ್ನು ತೆಗೆಸುವ ಸಂಬಂಧ ನಾನು ಪ್ರಗತಿ ಆಸ್ಪತ್ರೆಗೆ ಹೋಗಿದ್ದೇನೆ. ನನಗೆ ಅಲ್ಲಿ ವೈದ್ಯರಾದ ಅಜಯ್ ರವರು ಚಿಕಿತ್ಸೆ ಕೊಟ್ಟಿದ್ದಾರೆ. ನಾನು ಪ್ರಗತಿ ಆಸ್ಪತ್ರೆಗೆ ಅಪಘಾತದಿಂದಾದ ಗಾಯಗಳ ಸಲುವಾಗಿ ಚಿಕಿತ್ಸೆ ಪಡೆಯಲು ಹೋಗಿಲ್ಲ , ಬೇರೆ ಖಾಯಿಲೆಗೆ ಚಿಕಿತ್ಸೆ ಪಡೆಯಲು ಹೋಗಿದ್ದೇನೆ ಎಂದರೆ ಸುಳ್ಳು. ನನಗೆ ಎಲ್ಲಾ ಚಿಕಿತ್ಸೆಗಳನ್ನು ಡಿಸ್ಚಾರ್ಜ್ ಆಗುವ ಮುನ್ನ ಕೆಎಸ್ ಹೆಗ್ಡೆ ಆಸ್ಪತ್ರೆಯಲ್ಲಿ ಕೊಟ್ಟಿದ್ದಾರೆ ಎಂದರೆ ಸರಿ.

11. ನನಗೆ ಅಂಗ ಊನತ್ವ ಪ್ರಮಾಣಪತ್ರ ಯಾವ ದಿನಾಂಕದಂದು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಸರ್ಕಾರಿ ಆಸ್ಪತ್ರೆಯಿಂದ ಯುನಿಕ್ಯು Disability Certificate ಕೊಟ್ಟಿದ್ದಾರೆ ಆ ಸರ್ಟಿಫಿಕೇಟ್ ನ್ನು ಸರ್ಕಾರದಿಂದ ಪಡೆಯುವ ಸೌಲಭ್ಯ ಗಳನ್ನು ಪಡೆಯಲು ಕೊಡುತ್ತಾರೆ ಎಂದರೆ ಸರಿ. ಆ ಸರ್ಟಿಫೀಕೆಟ್ 5 ವರ್ಷಗಳಿಂದ ರಿನೀವಲ್ ಆಗುತ್ತದೆ ಎಂದರೆ ಸರಿ. ಸರ್ಕಾರಿದಿಂದ ನನಗೆ ಈ ವರೆಗೆ ಯಾವುದೇ ಪೆನ್ಶನ್ ಬರಲಿಲ್ಲ. ಯುನಿಕ್ಯು Disability Certificate ವೈದ್ಯರು ನನ್ನ ಕಾಲಿನ ಎಕ್ಸರೇ ತೆಗೆಸಿದ್ದಾರೆ. ಆ ಸಮಯದಲ್ಲಿ ನನ್ನ ಎಲ್ಲಾ ಚಿಕಿತ್ಸೆ ಮುಗಿದಿತ್ತು ಎಂದರೆ ಸರಿಯಲ್ಲ.

12. ನನಗೆ ಅಂಗ ಊನತ್ವ ಪ್ರಮಾಣಪತ್ರ ಕೊಡುವ ಸಮಯದಲ್ಲಿ ವೈದ್ಯರು ನಾನು ಏನು ಕೆಲಸ ಮಾಡುತ್ತೇನೆ ಎಂದು ಕೇಳಿದ್ದಾರೆ. ನನಗೆ ಕೆಲಸ ಮಾಡಲು ಆಗುವುದಿಲ್ಲ ಮತ್ತು ಕೆಲಸ ಮಾಡಬಾರದು ಎಂದು ಅಂಗ ಊನತ್ವ ಪ್ರಮಾಣಪತ್ರದಲ್ಲಿ ನಮೂದು ಮಾಡಿರುವ ಬಗ್ಗೆ ನೆನಪು ಇಲ್ಲ. ಅಂಗಊನತ್ವ ಪ್ರಮಾಣಪತ್ರದಲ್ಲಿ ನಮೂದಿಸಿರುವ

ಶಾಶ್ವಾತ ಅಂಗ ಊನತೆ ಅಪಘಾತದಿಂದಾದ ಗಾಯಗಳಿಂದ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಆಗಿರುವ ಗಾಯಗಳಿಗೂ ಹಾಗೂ ಅಂಗಊನತ್ವ ಪ್ರಮಾಣಪತ್ರಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹೆಚ್ಚು ಪರಿಹಾರ ಪಡೆಯುವ ಉದ್ದೇಶದಿಂದ ಅಂಗಊನತ್ವ ಪ್ರಮಾಣಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ,

13.ನನಗೆ ಮೆಡಿಕ್ಲೇಮು ಪಾಲಿಸಿ ಇರಲಿಲ್ಲ. ದಿನಾಂಕ 11-04-2024 ರ ಬಿಲ್ಲಿನಲ್ಲಿ ಕ್ರೆಡಿಟ್ ಬಿಲ್ಲು ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿಲ್ಲುಗಳಿಗೂ ಹಾಗೂ ಅಪಘಾತ ಸಂಬಂಧಿತ ಆದ ಗಾಯಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೆ ಮೆಡಿಕ್ಲೇಮು ಪಾಲಿಸಿ ಇತ್ತು ಆದ ಕಾರಣ ನನ್ನ ಎಲ್ಲಾ ವೈದ್ಯಕೀಯ ಖರ್ಚುಗಳಿಗೆ ಮಾಡಿದ ಹಣ ಮರುಪಾವತಿಯಾಗಿದೆ ಎಂದರೆ ಸರಿಯಲ್ಲ.

14. ನಾನು ಹಾಜರುಪಡಿಸಿದ ಬಿಲ್ಲುಗಳಿಗೆ ಔಷಧ ಚೀಟಿಗಳು ಇರುವುದಿಲ್ಲ ಎಂದರೆ ಸರಿಯಲ್ಲ, ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

15. ನಾನು 7ನೇ ತರಗತಿ ಓದಿದ್ದೇನೆ. ನನಗೆ ಆಧಾರ್ ಕಾರ್ಡ್ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು ಮೊದಲು ಮನೆಮನೆಗೆ ಹೋಗಿ ಬಟ್ಟೆ ವ್ಯಾಪಾರ ಮಾಡುತ್ತಿದ್ದೆ. ನಾನು ಪುತ್ತೂರು ಹಾಗೂ ಸುಳ್ಯ ಗ್ರಾಮಾಂತರ ವ್ಯಾಪ್ತಿಯಲ್ಲಿ ವ್ಯಾಪಾರ ಮಾಡುತ್ತಿದ್ದೆ. ಅದಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಬಟ್ಟೆಗಳನ್ನು ನಾನು ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ ಬಗ್ಗೆ ಲೆಕ್ಕಪತ್ರಗಳು ಇರಬಹುದು. ನಾನು ಗ್ರಾಹಕರಿಗೆ ಬಟ್ಟೆಗಳನ್ನು ಮಾರಾಟ ಮಾಡಿದ ನಂತರ ಅವರಿಗೆ ಪಡೆದ ಹಣದ ಸಂಬಂಧ ರಶೀದಿ ಕೊಡುತ್ತಿರಲಿಲ್ಲ . ನಾನು ವ್ಯಾಪಾರದ ಸಂಬಂಧ ಬಿಲ್ ಬುಕ್ ನ್ನು ಇಟ್ಟಿರಲಿಲ್ಲ.

16. ನಾನು ಆದಾಯ ತೆರಿಗೆ ಪಾವತಿಸುತ್ತಿದ್ದೆ. ನನಗೆ ಮಾಸಿಕ ರೂ. 50,000/- ಆದಾಯ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿಯು ಆದಾಯ ತೆರಿಗೆ ಪಾವತಿ ಮಾಡಿರುವ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಸೇರಿದ ಬ್ಯಾಂಕ್ ಖಾತೆ ಇರುತ್ತದೆ. ಅದರಲ್ಲಿ ನಾನು ವ್ಯಾಪಾರ ಸಂಬಂಧ ವ್ಯವಹರಿಸಿರುವ transactionಇರಬಹುದು. ನನ್ನ ಅರ್ಜಿಯಲ್ಲಿ ಹಾಗೂ ವಾಕ್ಯ ಪ್ರಮಾಣಪತ್ರದಲ್ಲಿ ನಮೂದಿಸಿರುವಂತೆ ನನಗೆ ಆದಾಯ ಇರಲಿಲ್ಲ ಎಂದರೆ ಸುಳ್ಳು. ನನಗೆ ಆದ ಗಾಯಳಿಗೂ ಹಾಗೂ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2ನೇ ಎದುರುದಾರರು ನನಗೆ ಅಪಘಾತ ಸಂಬಂಧತವಾಗಿ

ಯಾವುದೇ ಪರಿಹಾರ ಕೊಡಲು ಭಾಧ್ಯಸ್ಥರಲ್ಲ ಎಂದರೆ ಸುಳ್ಳು. ಹೆಚ್ಚು ಪರಿಹಾರ ಪಡೆಯುವ ಸಂಬಂಧ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ , ಹಾಜರುಪಡಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.